ನಾವು ಅನುಮಾನಿಸಬೇಕೇ ಹೊರತು ಅದು ಅವರ ಉದ್ದೇಶ ಆಗಿರುವುದಿಲ್ಲ. ಎಲ್ಲ ಸಮಕಾಲೀನ ಸಮಸ್ಯೆಗಳೂ ವ್ಯಾಸರ ಕತೆಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಚರ್ಚೆಗೆ ಒಳಪಡುತ್ತವೆ ನಿಜ. ಆದರೆ ಅದರ ಬೆನ್ನು ಹತ್ತಿ ಹೋಗಿ ವಿಚಾರ ಮಾಡೋ ಉದ್ದೇಶ, ಅಭಿಲಾಷೆ ಅವರಿಗಿಲ್ಲ. ಈ ಕಾರಣಕ್ಕೋಸ್ಕರ ಕನ್ನಡ ಸಾಹಿತ್ಯದಲ್ಲಿ ಇದೊಂದು ವಿಶಿಷ್ಟ ಕ್ರಮ ಅಂತಲೇ ತಿಳಿಯಬೇಕಾಗಿದೆ.

**2**

ತಮ್ಮ ಸಾಹಿತ್ಯದ ಬಗ್ಗೆ ಪ್ರೊಜೆಕ್ಟ್ ಮಾಡುವಂತವರೇ ಜಾಸ್ತಿ ಇರುವಾಗ ತನ್ನ ಸಾಹಿತ್ಯದ ಬಗ್ಗೆ ಏನನ್ನೂ ಮಾತನಾಡದೇ ಇದ್ದು, ಸ್ವಂತಕ್ಕೆ ಪೂರ್ತಿಯಾಗಿ ಇಳಿದು ಬಿಡುವ ಲೇಖಕರು ವ್ಯಾಸರು. ತನ್ನ ಕಾಲದ ವಿಸಂಗತಿಗಳನ್ನೂ ವಿಕೃತಿಗಳನ್ನೂ ಅನುಭವಗಳ ಜತೆಗೇ ತಾನು ಕಲ್ಪಿಸಿಕೊಳ್ಳಬಹುದಾದ ಅನುಭವಗಳನ್ನೂ ಕೂಡ ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಿಸಬಲ್ಲ ಸಾಮರ್ಥ್ಯ ಅವರಿಗಿತ್ತು. ಅನುಭವಿಸಿದ್ದನ್ನೂ ಆಲೋಚಿಸಿದ ವಿಚಾರಗಳನ್ನೂ ಸಮತೋಲನವಾಗಿ ಕಟ್ಟುವ ಶಕ್ತಿ ಅವರಿಗಿತ್ತು.

ವ್ಯಾಸರು ತಮ್ಮದೇ ಆದ ವಿಶಿಷ್ಟವಾದ ಸಾಹಿತ್ಯ ತತ್ವವನ್ನು ಕತೆಯೊಳಗಡೆಯೇ ಹೇಳಿರುತ್ತಾರೆ. 'ಜಡ' ಎನ್ನುವ ಕತೆಯಲ್ಲಿ ಹೀಗೊಂದು ಸಾಲು ಬರುತ್ತದೆ: "ಕವಿತೆಯ ಹಾಗೆ ಕತೆ ಹೇಳಲಾಗುವುದಿಲ್ಲ. ಕವಿತೆ ಕಟ್ ಆದರೆ ಅಲ್ಲೂ ಒಂದು ಅರ್ಥ ಹೊಳೆಯುತ್ತದೆ. ಕತೆ ತುಂಡಾದರೆ ಹೋಯಿತು. ಅದು ಮತ್ತೆ ಬರುವುದೇ ಇಲ್ಲ. ಕಥಾಪಾತ್ರಗಳು ಸತ್ತುಹೋಗುತ್ತವೆ. ನಿಜಸಾವಿನಿಂದ ವ್ಯಕ್ತಿಯನ್ನು ಮರೆತಂತೆ ಕಥಾಪಾತ್ರದ ಸಾವಿನಿಂದ ಕತೆ ಮರೆತು ಹೋಗುತ್ತದೆ. ಹಾಗೆ ಸಮಾಧಿಯಾದ ಕತೆ ಮತ್ತೆ ಬರುವುದೇ ಇಲ್ಲ." ಕವಿತೆಯಲ್ಲಿ ತಿಳಿದುದರಿಂದ ತಿಳಿಯದೇ ಇರುವುದನ್ನೂ ಮತ್ತು ತಿಳಿಯದೇ ಇರುವುದರಿಂದ ತಿಳಿದುದನ್ನೂ ಆರಿಸಿ ಹೊಂದಾಣಿಕೆ ಮಾಡಿಕೊಳ್ಳಬಹುದು. ಅರ್ಥವಾಗದ ಸಾಲುಗಳಿಂದ ಅರ್ಥವಾಗುವ ಸಾಲುಗಳು ತಿಳಿಯುತ್ತವೆ. ಅರ್ಥವಾಗುವ ಸಾಲುಗಳಿಂದ ಅರ್ಥವಾಗದ ಸಾಲುಗಳು ತಿಳೀತವೆ. ಅದು ಕವಿತೆಯ ಮಾಂತ್ರಿಕತೆ. ಕತೆಯಲ್ಲಿ ಹಾಗಾಗುವುದಿಲ್ಲ. ಒಂದೊಂದು ವಿವರವೂ ಒಂದೊಂದು ಲಯವನ್ನೂ ಸಮಗ್ರತೆಯನ್ನೂ ಕಟ್ಟಿಕೊಳ್ಳಬೇಕಾಗುತ್ತದೆ. ಇಬ್ಬರು ಲೇಖಕರ ಜತೆಯಲ್ಲಿ ನಡೆಯುವ ಸಾಹಿತ್ಯ ಚರ್ಚೆಯನ್ನು ತನ್ನ ಸಾಹಿತ್ಯ ತತ್ವವನ್ನಾಗಿ ಮಾಡುತ್ತಾರೆ ವ್ಯಾಸರು. ಅಂತಹ ಐದಾರು ಕತೆಗಳು ಸಿಗುತ್ತವೆ. ಇದರಲ್ಲಿ ಇಬ್ಬರು ಸಾಹಿತಿಗಳ ಲೋಕದೃಷ್ಟಿಯನ್ನು ಸಮೀಕ್ಷಿಸುವ ದೃಷ್ಟಿಯೂ ಇದೆ.

ಇನ್ನೊಂದು ಕಡೆ ಹೀಗೆ ಬರುತ್ತದೆ: "ಕತೆ ಬೇಕಾದರೆ ಮುಗಿಸಬಹುದು. ಕತೆ ನಡೆದ ಹಾಗೆ ನಿಂತಲ್ಲಿ ನಿಲ್ಲಿಸಬಹುದು. ಹೇಳದ ಕತೆಯನ್ನು ಊಹಿಸುವಾತನೇ ನಿಜವಾದ ಓದುಗ. ಹೇಳಿದ ಕತೆಯನ್ನು ಒಂದಿಷ್ಟು ಹೇಳದೇ ಉಳಿಸುವಾತನೇ ನಿಜವಾದ ಕತೆಗಾರ..." ಸಾಹಿತ್ಯದ ಸೂಕ್ಷ್ಮವಾದ ತಾತ್ವಿಕ ಗ್ರಹಿಕೆ ಇದು. ವ್ಯಾಸರು ತನ್ನ ಪರಿಸರದಲ್ಲಿ ಇರುವ ಇತರ ಗ್ರಹಿಕೆಗಳನ್ನು ಉಪೇಕ್ಷಿಸುತ್ತಾರೆ. ತನಗೆ ತನ್ನದೇ ಆದ ಸಾಹಿತ್ಯ ಗ್ರಹಿಕೆಯೊಂದನ್ನು ಕಟ್ಟಿಕೊಳ್ಳಬೇಕೆಂದು ಬಯಸುತ್ತಾರೆ.

ನವ್ಯರಲ್ಲಿ ಕಾಣುವಂತೆ ಓದುಗರಲ್ಲಿ ಆಸಕ್ತಿಯನ್ನೂ ಕುತೂಹಲವನ್ನೂ ಹುಟ್ಟಿಸುವ ಶೈಲಿ ವ್ಯಾಸರದ್ದು. ಅವರ ಕತೆಗಳು ಒಂದು **puzzle** ಇದ್ದ ಹಾಗೆ. ಒಂದು ಸಮಸ್ಯೆಗೆ ನಮ್ಮನ್ನು ಸಿಕ್ಕಿಹಾಕಿಕೊಳ್ಳುವ ಕ್ರಮ. ನೇರವಾದ ರೀತಿಯಲ್ಲಿ ಹೇಳಿದಂತೆ ತೋರುತ್ತದಾದರೂ ಓದುಗನನ್ನು ಒಂದು ಗೊಂದಲಕ್ಕೆ ಉದ್ದೇಶಪೂರ್ವಕವಾಗಿ ಒಳಪಡಿಸುತ್ತವೆ. ಗೊಂದಲ ಎನ್ನುವುದನ್ನು ನಾನು ಪಾಸಿಟಿವ್ ಅರ್ಥದಲ್ಲೇ ಬಳಸುತ್ತಿದ್ದೇನೆ. ಒಂದು ನಿತ್ಯದ ಜಗತ್ತನ್ನು ಸೃಷ್ಟಿಸುವ ಮೂಲಕವೇ